ಪಕ್ಷದಲ್ಲಿ ಇಲಾಖಾವತಿಯಿಂದಲೇ ಗುತ್ತಿಗೆದಾರರ ಖರ್ಚು ಹಾಗೂ ಹೊಣೆಗಾರಿಕೆಯಲ್ಲಿ ಕಾಮಗಾರಿಗಳನ್ನು ತೆಗೆದುಕೊಂಡು ಪೂರ್ಣಗೊಳಿಸಲಾಗುವುದು.

ಈ. ಕಾಮಗಾರಿಗಳನ್ನು ಏಪ್ರಿಲ್ 2003ರ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಮಂಡ್ಯನಗರದಲ್ಲಿ ಅಬಕಾರಿ ಇಲಾಖೆಯ ಕಾರ್ಯನಿರ್ವಹಣೆ

1854 (2478) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಂಡ್ಯ ನಗರದಲ್ಲಿ ಮದ್ಯದ (ಮಾದಕ ಪಾನೀಯ) ಅಂಗಡಿಗಳನ್ನು ಹಾಗೂ ಸಾರಾಯಿ ಅಂಗಡಿಗಳನ್ನು ನಿಯಮಾವಳಿಗಳಿಗೆ ಅನುಸಾರವಾಗಿ ನಿಯಂತ್ರಣಗೊಳಿಸುವಲ್ಲಿ ಇಲಾಖೆ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಮಂಡ್ಯ ಜಿಲ್ಲೆಯಲ್ಲಿ ಇಲಾಖೆ ವಿಫಲವಾಗುತ್ತಾ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿ ಸಾರ್ವಜನಿಕರ ಹಿತರಕ್ಷಣೆ ಮಾಡುವ ದಿಸೆಯಲ್ಲಿ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಕೈಗೊಳ್ಳಲಿರುವ ಕ್ರಮಗಳೇನು?

ಇಲಾಖಾ ವೈಫಲ್ಯಗಳ ಬಗೆಗೆ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ. ಇಲ್ಲ.

ಆ. ಅಬಕಾರಿ ನಿಯಮ ಹಾಗೂ ಸನ್ನದು ಷರತ್ತು ಉಲ್ಲಂಘನೆ ಯಾದ ಪ್ರಕರಣಗಳಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಜುಲೈ 2002 ರಿಂದ ಇಲ್ಲಿಯವರೆಗೆ ಒಟ್ಟು 297 ಮೊಕದ್ದಮೆಗಳನ್ನು ದಾಖಲಿಸಿ, ಈ ಮೊಕದ್ದಮೆಗಳನ್ನು ಇಲಾಖಾ ಮುಖಾಂತರ ಇತ್ಯರ್ಥಗೊಳಿಸಿ ಒಟ್ಟು ರೂ. 14,85,000/ ಗಳ ದಂಡವನ್ನು ವಸೂಲು ಮಾಡಲಾಗಿದೆ. ಇದಲ್ಲದೆ ಗುರುತರ ಅಪರಾಧಕ್ಕಾಗಿ ದಾಖಲಿಸಿದ ಮೂರು ಪ್ರಕರಣಗಳಲ್ಲಿ ಸನ್ನದುಗಳನ್ನು ಅಮಾನತ್ತುಗೊಳಿಸಲಾಗಿದೆ.

ಇಲಾಖೆ ವೈಫಲ್ಯವಾಗಿಲ್ಲದ ಕಾರಣ, ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮಂಡ್ಯನಗರದ ಕುಡಿಯುವ ನೀರಿನ ವಿತರಣಾ ಜಾಲನ್ನು ಆಧುನೀಕರಣಗೊಳಿಸುವುದು

1855 (2479) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಂಡ್ಯ ನಗರಕ್ಕೆ ಕುಡಿಯುವ ನೀರನ್ನು ಮಾಡುವ ಎರಡನೇ ಹಂತದ ಕಾವೇರಿ ನದಿ ನೀರಿನ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಂಡಿರುವುದು ಸರ್ಕಾರವು ಮನಗಂಡಿದೆಯೇ? ವಿತರಣಾ ಜಾಲದ ವ್ಯವಸ್ಥೆ ಬಲಪಡಿಸಿ ಆಧುನೀಕರಣ ಮಾಡುವ ಅವಶ್ಯಕತೆಯ ಬಗೆಗೆ ಸರ್ಕಾರ ಗಮನಿಸಿದೆಯೇ?